**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>**

**<u>ಸಿ.ಸಿ.ನಂಃ 172/2024</u>**

**<u>ಫಿರ್ಯಾದುದಾರುಃ</u>** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

:**ವಿರುದ್ಧ**:

**<u>ಆರೋಪಿಃ</u>** 1. ಶ್ರೀ ತಿಮ್ಮಪ್ಪ,
ಬಿನ್ ಶ್ರೀ ರಂಗಪ್ಪ,
50 ವರ್ಷಗಳು,
ವಾಸಃ ಇಡೇಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

2. ಶ್ರೀ ಸಣ್ಣಚಂದ್ರನಾಯ್ಕು ,
ಬಿನ್ ಶ್ರೀ ತೋಳಚನಾಯ್ಕು,
70 ವರ್ಷಗಳು,
ವಾಸಃ ದೇವರಹೊಸಳ್ಳಿ ಗ್ರಾಮ,
ರಾಮಗಿರಿ ಹೋಬಳಿ,
ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**<u>ಆಪಾದನೆಯ ಸಾರಾಂಶ</u>**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 10.11.2023 ರಂದು ಸಂಜೆ 7.10 ಗಂಟೆಯಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಚೀರನಹಳ್ಳಿ ಗ್ರಾಮದ ರಾಜಪ್ಪರವರ ಮನೆಯ ಮುಂದೆ ಸತೀಶ್ ರವರು ಕೆಎ.03.ಹೆಚ್ಟಿ.3303 ರ ಹೊಂಡಾ ಆಕ್ಟೀವಾ ಸ್ಕೂಟಿಯನ್ನು ನಾಗೇನಹಳ್ಳಿ ಗೇಟ್ ಕಡೆಯಿಂದ ಚೀರನಹಳ್ಳಿ ಕಡೆಗೆ ಹೋಗುತ್ತಿರುವಾಗ ನಿಮ್ಮಲ್ಲಿ 1 ನೇ ಆರೋಪಿ ಕೆಎ.16.ಟಿಬಿ.2922 ರ ಟ್ರಾಕ್ಟರನ್ನು ಚೀರನಹಳ್ಳಿ ಕಡೆಯಿಂದ ನಾಗೇನಹಳ್ಳಿ ಗೇಟ್ ಕಡೆಗೆ

ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸತೀಶ್ ರವರು ಚಾಲನೆ ಮಾಡುತ್ತಿದ್ದ ಸ್ಕೂಟಿಗೆ ಎದುರುಗಡೆಯಿಂದ ಡಿಕ್ಕಿ ಹೊಡೆಸಿ ಅಪಘಾತಪಡಿಸಿರುತ್ತೀರಿ. ಈ ರೀತ್ಯ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನಿಮ್ಮಲ್ಲಿ 1 ನೇ ಆರೋಪಿಯಾದ ಮೇಲ್ಕಂಡ ಟ್ರ್ಯಾಕ್ಟರನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆಎ.03.ಹೆಚ್‌ಟಿ.3303 ರ ಆಕ್ಟೀವಾ ಸ್ಕೂಟಿ ಗೆ ಡಿಕ್ಕಿ ಹೊಡೆಸಿದ ಪರಿಣಾಮ ಸತೀಶ್ ರವರು ಸ್ಕೂಟಿ ಸಮೇತ ನೆಲಕ್ಕೆ ಬಿದ್ದು ಅವರ ತಲೆಗೆ, ಹೊಟ್ಟೆಗೆ ಹಾಗೂ ಕೈಗೆ ತೀವ್ರ ಸ್ವರೂಪದ ಪೆಟ್ಟುಬಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ. ಈ ರೀತ್ಯ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304(ಎ) ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನಿಮ್ಮಲ್ಲಿ 1 ನೇ ಆರೋಪಿ ಕೆಎ.16.ಟಿಬಿ.2922 ರ ಟ್ರಾಕ್ಟರ್ ಅನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲವೆಂದು ತಿಳಿದಿದ್ದರೂ ಸಹ ಚಲಾಯಿಸಿರುತ್ತೀರಿ. ಈ ರೀತ್ಯ 1 ನೇ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 181 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನಿಮ್ಮಲ್ಲಿ 2 ನೇ ಆರೋಪಿ 1 ನೇ ಆರೋಪಿಗೆ ಚಾಲನಾ ಪರವಾನಿಗೆ ಇಲ್ಲವೆಂದು ತಿಳಿದಿದ್ದರೂ ಸಹ ನೀವು ಕೆಎ.16.ಟಿಬಿ.2922 ರ ಟ್ರ್ಯಾಕ್ಟರ್ ಅನ್ನು ಚಾಲನೆ ಮಾಡಲು ನೀಡಿರುತ್ತೀರಿ. ಈ ರೀತ್ಯ 2 ನೇ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 180 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನಿಮ್ಮಲ್ಲಿ 2 ನೇ ಆರೋಪಿ ಕೆಎ.16.ಟಿಬಿ.2922 ರ ಟ್ರಾಕ್ಟರ್ ಗೆ ವಿಮೆ ಪ್ರಮಾಣ ಪತ್ರವನ್ನು ಮಾಡಿಸದೆ 1 ನೇ ಆರೋಪಿಗೆ ಚಾಲನೆ ಮಾಡಲು ಮಾಡಿರುತ್ತೀರಿ. ಈ ರೀತ್ಯ 2 ನೇ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 196 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಪ್ರಶ್ನೆ:1–** ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

**ಉತ್ತರ:** ಆರೋಪಿ:1. Yes
ಆರೋಪಿ:2. Yes

**ಪ್ರಶ್ನೆ:2–** ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮಗೆ ಯಾವುದಾದರೂ ಪ್ರತಿರಕ್ಷಣೆ ಇದೆಯೇ ?

**ಉತ್ತರ:** ಆರೋಪಿ:1. Pleaded not guilty and claimed to be tried
ಆರೋಪಿ:2. Pleaded not guilty and claimed to be tried

(ಈ ಮೇಲ್ಕಂಡ ಅಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.)

**ದಿನಾಂಕ: 19.04.2025.**

**ಸಹಿ/–**

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾದಂ., ತರೀಕೆರೆ**

**ಆರೋಪಿತರ ಸಹಿ:**